ಅಧ್ಯಕ್ಷರು.—ಪ್ರಶ್ನೆ 86 ಮತ್ತು 146 ಎರಡನ್ನೂ ಒಟ್ಟಿಗೆ ತೆಗೆದುಕೊಂಡರೆ ಸದಸ್ಯರು ಪ್ರಶ್ನೆ ಕೇಳಲು ಅನುಕೂಲವಾಗುತ್ತದೆ.

ವಿಷಯ: ನೇತ್ರಾವತಿ ಹಾಗೂ ಇತರ ನದಿಗಳಿಗೆ ಅಡ್ಡಲಾಗಿ ಅಣೆಕಟ್ಟುಗಳನ್ನು ನಿರ್ಮಿಸುವುದು.

ಪ್ರ. 270 (86) ಶ್ರೀ ಧನುಂಜಯ ಕುಮಾರ್ (ಮಂಗಳೂರು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ದಕ್ಷಿಣ ಕನ್ನಡ ಜಿಲ್ಲೆಯ ನೆರಿಯದಲ್ಲಿ ನೇತ್ರಾವತಿ ಅಥವಾ ಇತರ ನದಿಗಳಿಗೆ ಅಣೆಕಟ್ಟು ಕಟ್ಟಿಸಿ ಮಂಗಳೂರು ಮಹಾನಗರಪಾಲಿಕೆ ಪ್ರದೇಶ ಹಾಗೂ ಸುತ್ತಮುತ್ತಲೂ ಕುಡಿಯುವ ನೀರು ಹಾಗೂ ಕೈಗಾರಿಕೆಗಳಿಗೆ ಬೇಕಾಗುವ ನೀರು ಸರಬರಾಜು ಮಾಡುವ ನೆರಿಯ ಯೋಜನೆಯ ಕೆಲಸ ಪ್ರಾರಂಭಿಸುವ ಯೋಜನೆ ಸರಕಾರದವರ ಮುಂದೆ ಇದೆಯೇ;

(ಆ) ಈ ಯೋಜನೆಯ ನೀಲಿ ನಕಾಶೆ ತಯಾರಿಸಲಾಗಿದೆಯೇ;

(ಇ) ಯೋಜನೆಯ ಅಂದಾಜು ವೆಚ್ಚ ವೆಷ್ಟು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).:—

(ಅ) ಯೋಜನೆಯು ಸವಿಸ್ತಾರ ಅನ್ವೇಷಣೆಯ ಹಂತದಲ್ಲಿದೆ.

(ಆ) ಇಲ್ಲ.

(ಇ) ಪ್ರಾರಂಭಿಕ ವರದಿಯಂತೆ 201 ಕೋಟಿ ರೂಪಾಯಿಗಳು.

ವಿಷಯ: ಬೆಳ್ತಂಗಡಿ ತಾಲ್ಲೂಕು ನೆರಿಯ ಯೋಜನೆ ಕುರಿತು.

ಪ್ರ. 278 (146) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ನಿರ್ಮಿಸಲುದ್ದೇಶಿಸಿರುವ ನೆರಿಯ ಯೋಜನೆಯ ಕಾರ್ಯ ಈಗ ಯಾವ ಹಂತದಲ್ಲಿ ಇದೆ;

(ಆ) ಸದರಿ ಯೋಜನೆಯಿಂದಾಗಿ ಮುಳುಗಡೆಯಾಗುವ ಪ್ರದೇಶಗಳಾವುವು ಹಾಗೂ ಇದರ ವಿಸ್ತೀರ್ಣ ಎಷ್ಟು;

(ಇ) ಮುಳುಗಡೆ ಪ್ರದೇಶದ ಜನರಿಗೆ ಸೂಕ್ತ ಪರಿಹಾರ ನೀಡದೆ ಅವರನ್ನು ಸ್ಥಳಾಂತರಿಸಬಾರದು ಮತ್ತು ಸ್ಥಳಾಂತರಗೊಂಡವರಿಗೆ ಬದಲಿ ವ್ಯವಸ್ಥೆ ಮಾಡದೆ ಸ್ಥಳಾಂತರಿಸಬಾರದು ಎಂಬುದು ಸರ್ಕಾರದವರ ನೀತಿಯಲ್ಲವೇ;

(ಈ) ಹಾಗಾದರೆ ಸರ್ಕಾರದವರು ಮುಳುಗಡೆ ಪ್ರದೇಶದ ಜನರಿಗೆ ಬದಲಿ ವ್ಯವಸ್ಥೆಗೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಅನ್ವೇಷಣೆಯಲ್ಲಿದೆ.

(ಆ) ಪೂರ್ಣ ಜಲಾಶಯ ಮಟ್ಟ ೧೧ ಎಲ್ 107·5 ಮೀಟರ್‌ಗಳವರೆಗೆ ಈ ಕೆಳಕಂಡ ಹಳ್ಳಿಗಳು ಮುಳುಗಡೆಯಾಗುತ್ತವೆ:

1. ಕಾಲಂಜಾ
2. ಪುಡುಪೆಟ್ಟು — ಪೂರ್ಣವಾಗಿ
3. ಪತ್ಯಾದಕ
4. ಚಿಬಿದ್ರಿ
5. ನಿಡ್ಲಿ — ಭಾಗಶಃ
6. ನೆರಿಯ

ಮುಳುಗಡೆಯಾಗುವ ಪ್ರದೇಶದ ವಿಸ್ತೀರ್ಣ —4050 ಹೆಕ್ಟೇರುಗಳು (ತಾತ್ಕಾಲಿಕ)
(10007 ಎಕರೆಗಳು)

(ಇ) ಅಹುದು.

(ಈ) ಸೂಕ್ತ ಸಮಯದಲ್ಲಿ ಅವಶ್ಯಕ ಕ್ರಮಗಳನ್ನು ಕೈಗೊಳ್ಳಲಾಗುವುದು.

ಶ್ರೀ ವಿ. ಧನುಂಜಯ ಕುಮಾರ್.—ಮಂಗಳೂರು ಹತ್ತಿರ ಪೆಟ್ರೋಕೆಮಿಕಲ್ಸ್ ಕಾರ್ಖಾನೆಯನ್ನು ಸ್ಥಾಪನೆ ಮಾಡುವ ವಿಚಾರ ಇದೆ. ಇದಕ್ಕೆ ಬೇಕಾದ ನೀರನ್ನು ಒದಗಿಸಲು ಅತ್ಯಂತ ಅಗತ್ಯವಿದೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದರೆ ಈ ಯೋಜನೆಗೆ ಬೇಕಾದಂಥ ನೀಲಿ ನಕಾಸೆಯನ್ನು ಯಾವಾಗ ತಯಾರಿಸುತ್ತೀರಿ? ಮತ್ತು ಈ ಯೋಜನೆಯಿಂದ ಆಗತಕ್ಕ ಇತರ ಉಪಯೋಗಗಳಾದರೂ ಏನು ಎಂಬುದನ್ನು ಹೇಳುತ್ತೀರಾ?

ಶ್ರೀ ಹೆಚ್. ಡಿ. ದೇವೇಗೌಡ.—ಇದು ಮಲ್ಟಿಪರ್ಪಸ್ ಪ್ರಾಜೆಕ್ಟ್. ಒಂದು ಮಂಗಳೂರು ನಗರಕ್ಕೆ ಕುಡಿಯುವ ನೀರನ್ನು ಕೊಡುವುದು, ಇನ್ನೊಂದು ರಿಫೈನರಿಗೆ ನೀರನ್ನು ಕೊಡುವ ವ್ಯವಸ್ಥೆ, ಇನ್ನೊಂದು ನೀರಾವರಿ ಜಮೀನಿಗೆ ನೀರನ್ನೊದಗಿಸುವುದು, ಮತ್ತೊಂದು ಇಲ್ಲಿ ಪವರ್ ಪ್ರಾಜೆಕ್ಟನ್ನು ಮಾಡುವುದಕ್ಕೆ ಸಾಧ್ಯವೇ ಎಂಬುದು. ಹೀಗೆ ನಾಲ್ಕು ರೀತಿಯ ಸೌಲಭ್ಯಗಳನ್ನು ಪಡೆಡುಕೊಳ್ಳುವುದಕ್ಕೆ ಸಾಧ್ಯತೆ ಇದೆ ಎಂಬುದಾಗಿ ತಜ್ಞರು ಹೇಳಿದ್ದಾರೆ. ಇದಕ್ಕೆ ಸುಮಾರು 200 ಕೋಟಿ ರೂಪಾಯಿಗಳು ಖರ್ಚಾಗುತ್ತವೆ. ಇದನ್ನು 3 ಹಂತಗಳಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಇದು ಇನ್ನೂ ಪರಿಶೀಲನಾ ಹಂತದಲ್ಲೇ ಇದೆ. ರಿಫೈನರಿಗೆ ನೀರನ್ನೊದಗಿಸುವ ದೃಷ್ಟಿಯಿಂದ ಈ ಯೋಜನೆಯನ್ನು ತೆಗೆದುಕೊಳ್ಳುವುದು ನಮ್ಮ ಕರ್ತವ್ಯ. ಈ ಯೋಜನೆಗೆ ಹೆಚ್.ಯು.ಡಿ. ಖಾತೆಯ ಸಚಿವರು, ವಿದ್ಯುಚ್ಛಕ್ತಿ ಖಾತೆಯ ಸಚಿವರು, ನಗರಾಭಿವೃದ್ಧಿ ಖಾತೆಯ ಸಚಿವರು ಇನ್ನೂ ಮುಂತಾದವರಿಂದ ಹಣವನ್ನು ಪಡೆದುಕೊಂಡು 3 ಹಂತಗಳಲ್ಲಿ ಇದನ್ನು ಮುಗಿಸಬೇಕೆಂದು ಸರ್ಕಾರದ ಇಚ್ಛೆ ಇದೆ.

ಶ್ರೀ ವಿ. ಧನಂಜಯ ಕುಮಾರ್.—ಸ್ವಾಮಿ, ತಾವು ಹೇಳುವುದನ್ನು ನೋಡಿದರೆ ಹಣದ ಅಡಚಣೆಯಿಂದಾಗಿ ಈ ಯೋಜನೆಯನ್ನು ಕಾರ್ಯಗತ ಮಾಡುವ ಬಗ್ಗೆ ಹಿಂದುಮುಂದು ನೋಡುತ್ತಿದ್ದೀರೆಂದು ಅನಿಸುತ್ತದೆ. ಆದ್ದರಿಂದ ನಾನು ತಮಗೆ ಹೇಳುತ್ತೇನೆ., ಆದಷ್ಟು ತೀವ್ರವಾಗಿ ಕೇಂದ್ರ ಸರ್ಕಾರದಿಂದಲೋ ವಿಶ್ವ ಬ್ಯಾಂಕಿನಿಂದಲೋ ಅಥವಾ ಬೇರೆ ಯಾವುವಾದರೂ ಮೂಲಗಳಿಂದಲೋ ಈ ಯೋಜನೆಗೆ ಹಣವನ್ನು ಒದಗಿಸಿಕೊಂಡು ಆದಷ್ಟು ಜಾಗ್ರತೆ ಇದನ್ನು ಕಾರ್ಯಗತ ಮಾಡುವ ಯೋಚನೆ ಮಾಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಸರ್ಕಾರಕ್ಕೆ ಹೆಚ್ಚಿನ ಆಸಕ್ತಿ ಇರುವುದರಿಂದಲೇ ಇದನ್ನು ಇನ್‌ವೆಸ್ಟಿಗೇಷನ್ ಮಾಡಿಸಿ ಒಂದು ರೂಪಕ್ಕೆ ತರುತ್ತಿದ್ದೇವೆ. ಈ ಬಗ್ಗೆ ಆದಷ್ಟು ತೀವ್ರವಾಗಿ ಇನ್‌ವೆಸ್ಟಿಗೇಷನ್ ಮಾಡಿ ಒಂದು ಅಂತಿಮ ಸ್ವರೂಪಕ್ಕೆ ತರಬೇಕೆಂದು ತಜ್ಞರಿಗೆ ತಿಳಿಸಿದ್ದೇವೆ. ಇದರ ಜೊತೆಗೆ ಸಾಧ್ಯವಾದಷ್ಟೂ ಪ್ರಯತ್ನ ಮಾಡಿ ಆರ್ಥಿಕ ಸಂಪನ್ಮೂಲಗಳನ್ನು ವಿವಿಧ ಖಾತೆಗಳ ಸಚಿವರಿಂದ ಪಡೆದು ಈ ಯೋಜನೆಯನ್ನು ಕೈಗೆ ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇವೆ.

ಶ್ರೀ ವಿ. ಧನಂಜಯ ಕುಮಾರ್.—ಈ ಯೋಜನೆ ತಡವಾಗುವುದಾದರೆ ಪೆಟ್ರೋಲ್ ಶುದ್ಧೀಕರಣ ಕಾರ್ಖಾನೆಯು ನಮ್ಮ ಜಿಲ್ಲೆಗೆ ಬರುವುದು ತಡವಾಗಬಹುದೆಂಬ ಶಂಕೆ ನಮಗ್ದಿ.

ಶ್ರೀ ಹೆಚ್. ಡಿ. ದೇವೇಗೌಡ.—ಇದನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಪ್ರಯತ್ನ ಮಾಡುತ್ತಿದೆ.

ಶ್ರೀ ಕೆ. ವಸಂತ ಬಂಗೇರ.—ಈ ಯೋಜನೆಯಲ್ಲಿ 6 ಹಳ್ಳಿಗಳು ಮುಳುಗಡೆಯಾಗುತ್ತವೆ. ತಾತ್ಕಾಲಿಕವಾಗಿ 4050 ಹೆಕ್ಟೇರ್ ಭೂಮಿ ಮುಳುಗಡೆಯಾಗುತ್ತದೆಂದು ಹೇಳಿದ್ದೀರಿ. ಆದರೆ ಒಟ್ಟು ಎಷ್ಟು ಹೆಕ್ಟೇರ್ ಮುಳುಗಡೆಯಾಗುತ್ತದೆಂದು ಖಚಿತವಾಗಿ ಹೇಳುವುದಕ್ಕೆ ಸಾಧ್ಯವೇ ?

ಇನ್ನು ಎರಡನೆಯದಾಗಿ, ಇತರ ಕಡೆಗಳಲ್ಲೂ ಖಾಸಗಿಯವರ ಜಮೀನನ್ನು ಸ್ವಾಧೀನಪಡಿಸಿಕೊಂಡಿರುವುದರಿಂದ ಅಲ್ಲಿನ ಬಹಳ ಜನರಿಗೆ ತೊಂದರೆಯಾಗಿದೆ. ಪ್ರಾರಂಭದ ಹಂತದಲ್ಲೇ ಅವರಿಗೆ ನ್ಯಾಯವಾದ ಪರಿಹಾರವನ್ನು ಕೊಟ್ಟು ಬೇರೆ ಕಡೆ ಸೂಕ್ತ ನಿವೇಶನಗಳನ್ನು ಒದಗಿಸಿದ ನಂತರ ಈ ಯೋಜನೆಯ ಕಾರ್ಯವನ್ನು ವನ್ನು ಕೈಗೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಸಾಮಾನ್ಯವಾಗಿ ಯಾವುದೇ ಯೋಜನೆಯನ್ನು ಮಾಡುವುದಕ್ಕೆ ಹೋದರೂ ಅನೇಕ ಹಳ್ಳಿಗಳು, ಸಾವಿರಾರು ಎಕರೆ ಜಮೀನು ಮುಳುಗಡೆ ಆಗುತ್ತದೆ. ಇದು ಅನಿವಾರ್ಯವಾದ್ದರಿಂದ ಯಾರೂ ಏನೂ ಮಾಡುವುದಕ್ಕಾಗುವುದಿಲ್ಲ. ಇದರಲ್ಲಿ 4050 ಹೆಕ್ಟೇರ್ ಮತ್ತು 2230 ಹೆಕ್ಟೇರ್ ಭೂಮಿ ಮುಳುಗಡೆಯಾಗುತ್ತದೆ. ಸುಮಾರು 20 ಸಾವಿರ ಕುಟುಂಬಗಳು ಈ ತೊಂದರೆಗೆ ಈಡಾಗುತ್ತಾರೆ. ಯಾವುದೇ ಒಂದು ಯೋಜನೆ ಕಾರ್ಯಗತವಾಗುವಾಗ ಮುಳುಗಡೆಯಾಗುವ ಪ್ರದೇಶದ ಜನರಿಗೆ ಎಲ್ಲಾ ಸೌಲಭ್ಯಗಳನ್ನೂ ಕಾನೂನು ಚೌಕಟ್ಟಿನಲ್ಲಿ ಒದಗಿಸಿಕೊಡುತ್ತೇನೆ.

ಶ್ರೀ ಕೆ. ವಸಂತ ಬಂಗೇರ.—ಯಾರು ಜಮೀನನ್ನು ಕಳೆದುಕೊಳ್ಳುತ್ತಾರೆ ಅಂಥವರಿಗೆ ಪ್ರಾರಂಭದಲ್ಲೇ ಸೂಕ್ತ ಪರಿಹಾರ ನೀಡಿ ಅವರಿಗೆ ಪುನರ್ವಸತಿಯನ್ನು ಕಲ್ಪಿಸಿಕೊಟ್ಟು ಅನಂತರ ತಾವು ಈ ಯೋಜನೆಯನ್ನು ಪ್ರಾರಂಭಮಾಡಬೇಕೆಂಡು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದಕ್ಕೆ ಕೆಲವು ನಿಯಮಗಳಿವೆ. ಒಂದು ಪ್ರಾಜೆಕ್ಟ್ ಮಾಡಬೇಕಾದರೆ ಎಷ್ಟು ಜಮೀನು ಸ್ವಾಧೀನ ತೆಗೆದುಕೊಳ್ಳಬೇಕು, ಅಲ್ಲಿನ ಜನರಿಗೆ ಏನೇನು ಪುನರ್ವಸತಿ ಕಲ್ಪಿಸಿಕೊಡಬೇಕೆಂದು ನೋಡಿ ಅದರಂತೆ ಮಾಡುತ್ತೇನೆ. ಇದನ್ನು ಸರ್ಕಾರ ಯಾವುದೇ ಅಲಕ್ಷ್ಯ ಭಾವನೆಯಿಂದ ನೋಡುವುದಿಲ್ಲ.

ಡಾ ॥ ವಿ. ಎಸ್. ಆಚಾರ್ಯ.—ಮಾನ್ಯ ಅಧ್ಯಕ್ಷರೇ, ಕಳೆದ ಮಾರ್ಚ್ ತಿಂಗಳಲ್ಲಿ ನಾನು ಇದೇ ವಿಷಯದ ಬಗ್ಗೆ ಮಾನ್ಯ ಮಂತ್ರಿಗಳನ್ನು ಒಂದು ಪ್ರಶ್ನೆ ಕೇಳಿದ್ದೆ. ಇದೇ ರೀತಿಯ ಉತ್ತರ ಆಗಲೂ ಬಂದಿತ್ತು.

ಇವತ್ತು ಕುಡಿಯುವ ನೀರು, ನೀರಾವರಿ ಮತ್ತು ವಿದ್ಯುಚ್ಛಕ್ತಿ ಈ 3 ಸೌಲಭ್ಯಗಳೂ ಸಿಕ್ಕುವಂಥ ರೀತಿಯಲ್ಲಿ ಈ ಯೋಜನೆಯನ್ನು ಮಾಡಲಾಗುತ್ತದೆಂದು ಹೇಳಿದ್ದೀರಿ. ನಿಮ್ಮ ಪರಿಶೀಲನಾ ಕಾರ್ಯ ಮುಗಿದು ಯಾವಾಗ ಮೊದಲನೆಯ ಹಂತವನ್ನು ತೆಗೆದುಕೊಳ್ಳುತ್ತೀರಿ ? ಈ 3 ವಿಷಯಗಳಿಗೂ 3 ಹಂತಗಳನ್ನು

ಮಾಡುತ್ತೀರೋ ? ಅಥವಾ ಮೊದಲನೆಯ ಹಂತದಲ್ಲೇ ಈ 3 ವಿಷಯಗಳನ್ನೂ ತೆಗೆದುಕೊಂಡು ಸ್ವಲ್ಪ ಸ್ವಲ್ಪ ಕೆಲಸವನ್ನು ಮಾಡುತ್ತೀರೋ ? ತಾವು ಈ ಯೋಜನೆಯ ಮೊದಲನೆಯ ಹಂತವನ್ನು ಯಾವಾಗ ಪ್ರಾರಂಭ ಮಾಡುತ್ತೀರಿ ?

ಶ್ರೀ ಪೆಚ್. ಡಿ. ದೇವೇಗೌಡ.—ಮಾರ್ಜಿ ತಿಂಗಳಲ್ಲಿ ಕೊಟ್ಟ ಉತ್ತರಕ್ಕೂ, ಇವತ್ತು ಕೊಡತಕ್ಕ ಉತ್ತರಕ್ಕೂ ಸ್ವಲ್ಪ ಇಂಪ್ರೂವ್‌ಮೆಂಟ್ ಆಗಿದೆ. ಮಾರ್ಚಿ ತಿಂಗಳಲ್ಲಿ ನಾನು ಇಷ್ಟೊಂದು ಕರಾರು ವಾಕ್ಯಾಗಿ ಹೇಳುವುವಕ್ಕೆ ಶಕ್ತಿ ಇರಲಿಲ್ಲ. 201 ಕೋಟಿ ರೂಪಾಯಿಗಳು ವಿಚಾರ್ಗುತ್ತದೆಂದು ಹೇಳುವು ದಾಗಲೀ, 3 ಫೇಸ್‌ಗಳಲ್ಲಿ ತೆಗೆದುಕೊಳ್ಳುತ್ತೇವೆಂದು ಆಗಲಿ ಆಥವಾ ಈ ಯೋಜನೆಯಿಂದ ಇಂಥಿಂಥ ಉಪ ಯೋಗಗಳಿವೆ ಎಂಬುದನ್ನಾಗಲೀ ನಿಖರವಾಗಿ ಹೇಳತಕ್ಕ ಶಕ್ತಿ ನನಗೆ ಆಗ ಇರಲಿಲ್ಲ. ಈಗ 3 ತಿಂಗಳಲ್ಲಿ ಈ ಒಂದು ಮಟ್ಟಕ್ಕೆ ಬಂದಿದ್ದೇವೆ. ಸ್ವಲ್ಪಮಟ್ಟಿಗೆ ಸುಧಾರಣೆ ಆಗಿದೆ, ಸರ್ಕಾರಕ್ಕೆ ಇದರ ಬಗ್ಗೆ ಆಸಕ್ತಿ ಇದೆ ಎಂಬುದನ್ನು ಹೇಳಿದ್ದೇನೆ. ಮೊದಲನೆಯ ಹಂತದಲ್ಲಿ it is proposed to take up the project in 3 phases. Phase I costing Rs. 62 crores will comprise Naria dam to a partial height, Shippakoradi and raising main treatment plant, distribution of network ಇದು ಮೊದಲನೆಯ ಹಂತದಲ್ಲಿ ಬರುತ್ತದೆ. ಇದಕ್ಕೆ 62 ಕೋಟಿ ರೂಪಾಯಿಗಳು ವಿಚಾರ್ಗುತ್ತವೆ. ಒಟ್ಟಾರೆ ಸರ್ಕಾರ ತೀವ್ರವಾದ ಕಳಕಳಿಯಿಂದ ನಿರ್ಣಯವನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದೆ.

ಶ್ರೀ ವೈ. ಕೆ. ರಾಮಯ್ಯ.—ಹಣದ ಕೊರತೆಯಿಂದಾಗಿ ಕೆಲವು ನೀರಾವರಿ ಯೋಜನೆಗಳ ಕೆಲಸ ಕುಂಠಿತವಾಗಿದೆ ಎಂಬುದು ಮಾನ್ಯ ಸಚಿವರ ಬಡ್ಜೆಟ್ ಉತ್ತರದಲ್ಲಿ ತಿಳಿದುಬಂದಿದೆ. ಯಾವ ನೀರಾವರಿ ಹಣದ ಕೊರತೆಯಿಂದಾಗಿ ಕುಂಠಿತವಾಗಿದೆ ಆ ಭಾಗದ ಜನರು ಮುಂಗಡವಾಗಿ ತಮ್ಮ ಪಂತಿಕೆಯನ್ನು ಕೊಡುವುದಕ್ಕೆ ಮುಂದೆ ಬಂದರೆ ಆ ಹಣವನ್ನು ಸರ್ಕಾರ ತೆಗೆದುಕೊಂಡು ಎಲ್ಲಾ ಸೌಲಭ್ಯಗಳನ್ನೂ ಒದಗಿಸುವುದೇ ?

ಶ್ರೀ ಪೆಚ್. ಡಿ. ದೇವೇಗೌಡ.—ಈ ಸದನದ ಸದಸ್ಯರಿಂದ ಕೂಡಿದ ಒಂದು ಸಮಿತಿಯನ್ನು ನೇಮಕ ಮಾಡಿ ಅದರಲ್ಲಿ ಎಲ್ಲರ ಅಭಿಪ್ರಾಯಗಳನ್ನೂ ತೆಗೆದುಕೊಂಡು ಯಾವ ರೀತಿ ಈ ನೀರಾವರಿ ಯೋಜನೆಗಳಿಗೆ ಆರ್ಥಿಕ ಸಂಪನ್ಮೂಲಗಳನ್ನು ಕೂಡಿಸಿಕೊಳ್ಳಬೇಕೆಂಬುದನ್ನು ಸಮಾಲೋಚನೆ ಮಾಡುತ್ತೇವೆಂದು ಈಗಾಗಲೇ ಹೇಳಿದ್ದೇನೆ. ಇದು ಆದಮೇಲೆ ನಾವು ಒಂದು ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.

ವಿಷಯ: ಶಿರಾ ತಾಲ್ಲೂಕಿನಲ್ಲಿ ಕೈಗಾರಿಕೆಯನ್ನು ಅಭಿವೃದ್ಧಿಪಡಿಸುವ ಕುರಿತು.

ಪ್ರ. 271 (89) ಶ್ರೀ ಪಿ. ಮೂಡ್ಲೇಗೌಡ (ಶಿರಾ).—ಮಾನ್ಯ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

(ಅ) ಶಿರಾ ತಾಲ್ಲೂಕು ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

(ಆ) ಕೈಗಾರಿಕೆಯನ್ನು ಅಭಿವೃದ್ಧಿಪಡಿಸಲು ಈ ತಾಲ್ಲೂಕಿನಲ್ಲಿ ಸಿಗುವ ಕಚ್ಚಾ ಪದಾರ್ಥಗಳ ವಿವರ ಗಳೇನು ;

(ಇ) ಈ ತಾಲ್ಲೂಕಿನಲ್ಲಿ ಕೈಗಾರಿಕಾ ಅಭಿವೃದ್ಧಿ ಬಗ್ಗೆ ಸರ್ಕಾರದವರು ಯಾವ ಕ್ರಮ ತೆಗೆದು ಕೊಂಡಿದ್ದಾರೆ ;

(ಈ) ಈ ತಾಲ್ಲೂಕಿನಲ್ಲಿ ಹೇರಳವಾಗಿ ಬೆಳೆಯುತ್ತಿರುವ ಶೇಂಗಾ ಬೆಳೆಯಿಂದ ವನಸ್ಪತಿಯನ್ನು ಉತ್ಪಾದಿಸುವ ಕೈಗಾರಿಕೆಯನ್ನು ಪ್ರಾರಂಭಿಸುವ ಬಗ್ಗೆ ಸರಕಾರವು ಕ್ರಮ ತೆಗೆದುಕೊಳ್ಳುವುದೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು).—

(ಅ) ಬಂದಿದೆ.

(ಆ) ಶಿರಾ ತಾಲ್ಲೂಕಿನಲ್ಲಿ ದೊರೆಯುವ ಕಚ್ಚಾ ವಸ್ತುಗಳು :
ಕೃಷಿ ಆಧಾರಿತ ಕೈಗಾರಿಕೆಗಳು—ಭತ್ತ, ರಾಗಿ, ಜೋಳ, ಶೇಂಗಾ, ಹರಳು, ಹತ್ತಿ, ಕಬ್ಬು, ತೆಂಗು, ಹಿಪ್ಪನೇರಳೆ, ಹುಣಸೆ, ಹಣ್ಣುಗಳು, ಅಡಕೆ ಮತ್ತು ಇತರ ತರಕಾರಿಗಳು.
ಖನಿಜ ಆಧಾರಿತ ಕೈಗಾರಿಕೆಗಳು—ಕ್ವಾರಿ, ಜೇಡಿಮಣ್ಣು, ಮರಳು ಕಲ್ಲು.

(ಇ) ಇಲ್ಲಿ ಹೂಡಲಾಗುವ ಕೈಗಾರಿಕೆ ಬಂಡವಾಳಕ್ಕೆ ಶೇಕಡಾ 10 ರಷ್ಟು ರಾಜ್ಯ ಸಹಾಯಧನ (ಸಬ್ಸಿಡಿ) ಲಭಿಸುತ್ತದೆ.

(ಈ) ಸರಕಾರದಲ್ಲಿ ಈ ಯೋಜನೆಯಿಲ್ಲ. ಆದರೆ ಇಂತಹ ಕೈಗಾರಿಕೆಯನ್ನು ಸ್ಥಾಪಿಸಿದಲ್ಲಿ ಸರ್ಕಾರವು ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ಕೊಡುತ್ತದೆ.

ಶ್ರೀ ಪಿ. ಮೂಡ್ಲೇಗೌಡ.—ಮಾನ್ಯ ಅಧ್ಯಕ್ಷರೇ, ತಮ್ಮ ಉತ್ತರದಲ್ಲಿ ಶಿರಾ ತಾಲ್ಲೂಕಿನಲ್ಲಿ ಮರಳು ಮತ್ತು ಕಲ್ಲು ಸಿಗುತ್ತದೆಂದು ಹೇಳಿರುತ್ತೀರಿ. ಆದ್ದರಿಂದ ಅಲ್ಲಿ ಒಂದು ಗಾಜಿನ ಕಾರ್ಖಾನೆಯನ್ನು ಮಾಡಲಿಕ್ಕೆ ಸಾಧ್ಯವಾಗುತ್ತದೆಯೇ ಎಂದು ಕೇಳುತ್ತೇನೆ. ಮತ್ತು ಈ ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಶೇಂಗಾ